**ಸಾಕ್ಷಿಗೆ ದಿನಾಂಕ *26-03-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ವ್ಹಿ. ಬಿ. ಡಿ ವಕೀಲರಿಂದಃ**

ಈ ದಾವೆಯನ್ನು ಬಸವರಾಜ ರವರು ಮುದುಕಪ್ಪ ರವರ ಮೇಲೆ ಮಾಡಿರುತ್ತಾರೆ. ಈ ದಾವೆಯಲ್ಲಿ ಬಸವರಾಜ ಮತ್ತು ಮುದುಕಪ್ಪ ರವರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸರ್ವ ನಂ.188 ರ ಮೇಲೆ ಮಾಡಿರುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ ಇರುತ್ತದೆ ಮತ್ತು ಉತ್ತರಕ್ಕೆ, ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಏನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಬೇರೆ ಊರಿನಲ್ಲಿರುತ್ತೇನೆ ಮತ್ತು ದಾವಾ ಆಸ್ತಿಯು ಬೇರೆ ಊರಿನಲ್ಲಿರುತ್ತದೆ ಎಂದರೆ ಸರಿ. 1 ನೇ ವಾದಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.188 ಇದು ಮೂಲತಃ ಚನ್ನಪ್ಪ ರವರಿಗೆ ಸೇರಿದ್ದು ಎಂದು ನಾನು ಕೇಳಿರುತ್ತೇನೆ. ನಾನು ಭೂ-ನ್ಯಾಯಮಂಡಳಿಯ ಆದೇಶ ಪ್ರತಿಯನ್ನು ನೋಡಿರುವುದಿಲ್ಲ. ಭೂ-ನ್ಯಾಯಮಂಡಳಿಯಿಂದ ಸನ್ 1977 ರಲ್ಲಿ ಮಂಜೂರು ಆಗಿರುತ್ತದೆ. 1977 ರಲ್ಲಿ ಆಸ್ತಿಯ ಉತಾರೆಯು ಚನ್ನಪ್ಪ ರವರ ಹೆಸರಿನಲ್ಲಿತ್ತು. ಆದರೆ, ಸದರಿ ಆಸ್ತಿಯ ಉತಾರೆಯನ್ನು ನಾನು ನೋಡಿರುವುದಿಲ್ಲ. ನನಗೆ ಈ ದಾವೆಯಲ್ಲಿ ಸಾಕ್ಷಿ ಹೇಳಲು ಬಸವರಾಜ ರವರು ಹೇಳಿರುತ್ತಾರೆ. ನಾನು ಬಸವರಾಜ ರವರಿಗೆ ಜಮೀನು ಅಮರಾವತಿಯಲ್ಲಿದ್ದು, ಅಮರಾವತಿ ಗ್ರಾಮದ ಜನರನ್ನು ಸಾಕ್ಷಿ ಮಾಡಿಸಿ ಎಂದು ಬಸವರಾಜ ರವರಿಗೆ ಹೇಳಿರುವುದಿಲ್ಲ. ಸದರಿ ದಾವಾ ಆಸ್ತಿಯ ಕಬ್ಜಾದಲ್ಲಿ 1 ನೇ ಪ್ರತಿವಾದಿಯು ಬಹಳ ವರ್ಷಗಳಿಂದ ಇರುತ್ತಿದ್ದಾನೆ ಎಂಬ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಚನ್ನಪ್ಪರವರ ವಂಶಾವಳಿಯ ಬಗ್ಗೆ ಮತ್ತು ಅವರ ಮಕ್ಕಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ರುದ್ರಮ್ಮ ರವರು ಚನ್ನಪ್ಪ ರವರ ಸೊಸೆ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.03.26 17:04:08 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.